ಒಂದು ದಿನ ಬೆಳಿಗ್ಗೆ ಮರ್ಮಲೇಡ್ ತಿನ್ನುತ್ತಿರುವ ಒಬ್ಬ ಮನುಷ್ಯ ತನ್ನ ಬೆಳಗಿನ ಪತ್ರಿಕೆಯನ್ನು ಬಿಡಿಸಿ ಓದುತ್ತಾನೆ ಈ ಹೆಡ್‌ಲೈನುಗಳನ್ನು: ಆಸ್ಫೋಟಿಸುವ ದಿನಪತ್ರಿಕೆ – ಸಂಪೂರ್ಣ ವರದಿ – ಎಲ್ಲವನ್ನೂ ಹೇಳಿಕೊಂಡಿದ್ದಾಳೆ ವಿಧವೆ ಹೆಂಡತಿ – ಅದರ ಕೆಳಗೆ:

ವಿಶೇಷ ವರದಿ – ನಿನ್ನೆ ಬೆಳಗ್ಗೆ ಎಂಟು ಗಂಟೆಗೆ, ಅಥವಾ ಅದಕ್ಕೂ ಮುಂಚೆ, ನಂಬರ್ 51, ಫರ್ನ್ಲೀ ರೋಡಿನ ಮಿಸ್ಟರ್ ಫ್ರೆಡೆರಿಕ್ ಫರ್ಬಲ್ ಅವರಿಗೆ ಅವರು ಸಾಮಾನ್ಯವಾಗಿ ಓದುವ, ತೀರ ಸಾಧಾರಣವಾದ ಒಂದು ದಿನಪತ್ರಿಕೆ ಸರಬರಾಜಾಯಿತು. ಆಗ ಅವರ ಹೆಂಡತಿ ಮಿಸೆಸ್ ಮಾಬೆಲ್ ಫರ್ಬಲ್‌ರನ್ನು ಬಿಟ್ಟು ಬೇರೆ ಯಾರೂ ಮನೆಯಲ್ಲಿರಲಿಲ್ಲ. ಬ್ರೆಕ್‌ಫಾಸ್ಟ್ ಟೇಬಲಿನ ಮುಂದೆ ಕೂತು ಮಾರ್ಮಲೇಡ್ ಟೋಸ್ಟ್ ಸವಿಯುತ್ತಿದ್ದ ಮಿಸ್ಟರ್ ಫರ್‌ಬಲ್ ಪತ್ರಿಕೆಯನ್ನು ಓದತೊಡಗಿದರು. ಆಮೇಲೇನಾಯಿತು ಎಂಬುದನ್ನು ಮಿಸೆಸ್ ಫರ್‌ಬಲ್ ಅವರೇ ಸಾಕಷ್ಟು ನಾಟಕೀಯವಾಗಿ ವಿವರಿಸಿರುವುದನ್ನು ಓದಿ: "ಯಾರೋ ಒಬ್ಬ ಎಲ್ಲೋ ಒಂದು ಕಡೆ ಒಂದು ಆಸ್ಫೋಟಿಸೋ ಪತ್ರಿಕೆಯ ಬಗ್ಗೆ ವರದಿಯೊಂದನ್ನು ಓದುತ್ತಿದ್ದನಂತೆ ಒಂದು ಪತ್ರಿಕೆಯಲ್ಲಿ. ಆಮೇಲೆ ಕೆಲವೇ ನಿಮಿಷಗಳ ನಂತರ ಅವನು ಓದುತ್ತಿದ್ದ ಪತ್ರಿಕೆ ಟಿಕ್ ಟಿಕ್ ಎನ್ನುತ್ತಾ ಕಡೆಗೆ ಅವನ ಕೈಯಲ್ಲೇ ಢಮಾರ್ ಅಂತಂತೆ! ಅದನ್ನೆಲ್ಲ ಗಟ್ಟಿಯಾಗಿ ಓದಿದ ಇವರು, ಏನಿದರ ಅರ್ಥ ಅಂತ ಇನ್ನೂ ಯೋಚನೆ ಮಾಡ್ತಿರಬೇಕಾದರೆ ನಾನು ಏನಪ್ಪಾ ಇದು ಟಿಕ್ ಟಿಕ್ ಸದ್ದು (ಬಹುಶಃ ಕೆಟಲ್ ಕುದೀತಾ ಇರಬಹುದು ಅಂತ) ಅಡುಗೆ ಮನೆಗೆ ಹೋದ್ರೆ ಇದ್ದಕ್ಕಿದ್ದ ಹಾಗೆ ಢಂ! ಢಮ್ಮಂತ ಸಿಡೀತು ಪೇಪರ್; ಜೊತೆಗೆ ಪಾಪದ ಫ್ರೆಡೆರಿಕ್ ಕೂಡ. ಢಂ ಅಂತ ಅಂದದ್ದೇ ಹೊಗೆ ತುಂಬ್ಕೊಂಡ್‌ಬಿಡ್ತು. ಫ್ರೆಡೆರಿಕ್‌ರ ಸುಳಿವೇ ಇರಲಿಲ್ಲ, ಅವರ ಉಲ್ಲನ್ ಸಾಕ್ಸ್ ಬಿಟ್ಟು. (ಅದನ್ನು ಒಂದು ವಾರದ ಹಿಂದೆ ನಾನೇ ಹೆಣೆದಿದ್ದೆ). ಪಾಪದ ಫ್ರೆಡೆರಿಕ್, ಭಯಂಕರ ದುರಂತ. ನಂಗೆ ಏನೂ ಆಗಲಿಲ್ಲ" ಎಂದು ಹೇಳಿದ ಮಿಸೆಸ್ ಫರ್‌ಬಲ್, "ನನ್ನ ಕಾರ್ಪೆಟ್ ಮಾತ್ರ ಪೂರಾ ಸುಟ್ಟುಹೋಯ್ತು" ಎಂದೂ ಸೇರಿಸಿದರು.

ನಗರಾಡಳಿತದವರು ಈ ಘಟನೆಯ ಬಗ್ಗೆ ಇನ್ನೂ ತನಿಖೆ ನಡೆಸುತ್ತಿದ್ದು, ಇದುವರೆಗೆ ತೃಪ್ತಿಕರವಾದ ಯಾವುದೇ ಸಂಗತಿ ತಿಳಿದುಬಂದಿಲ್ಲ.

ಆ ಮನುಷ್ಯ ಸದ್ದಾಗುವಂತೆ ಪತ್ರಿಕೆಯ ಹಾಳೆಯನ್ನು ತಿರುಗಿಸಿ ಮುಂದಿನ ಪುಟದಲ್ಲಿ ಯುದ್ಧದ ಸಮಾಚಾರ ಓದತೊಡಗಿದ. "ಇನ್ನೂ ಸ್ವಲ್ಪ ಮಾರ್ಮಲೇಡ್ ಬೇಕಾ?" ಟೇಬಲಿನ ಆ ಬದಿಯಲ್ಲಿ ಪಿಂಕ್ ಬಣ್ಣದ ಡ್ರೆಸ್ಸಿನಲ್ಲಿದ್ದ ಅವನ ಹೆಂಡತಿ ಕೇಳಿದವಳೇ ಅಂಟಂಟಾದ ಬಾಟಲನ್ನು ಅವನತ್ತ ಸರಿಸಿದಳು. ಅವನು ಹುರಿದ ಮೊಟ್ಟೆಯ ಹಾಗೆ ಹುಂ ಎನ್ನುತ್ತ ಹೆಡ್‌ಲೈನುಗಳ ಮೇಲೆ ಕಣ್ಣಾಡಿಸುತ್ತಿದ್ದ. ಹಿನ್ನೆಲೆಯಲ್ಲೆಲ್ಲೋ ಕೆಟಲ್‌ನ ನೀರು ಕುದಿಯುತ್ತಿರುವ ಸದ್ದು. "ಆ ಗಡಿಯಾರ ಎತ್ತಿಕೊಂಡು ಹೋಗಬಾರದೆ, ಎಷ್ಟು ಕಿರಿಕಿರಿ ಮಾಡ್ತಿದೆ" ಎಂದ ಆ ಮನುಷ್ಯ. "ಗಡಿಯಾರ? ನಮ್ಮಲ್ಲೆಲ್ಲಿದೆ ಗಡಿಯಾರ?" ಒಂದು ಸೆಕೆಂಡ್ ನಿಶ್ಶಬ್ದ. ಟಿಕ್–ಟಿಕ್–ಟಿಕ್ – ಇಬ್ಬರೂ ಕಿರಿಚಿಕೊಳ್ಳುತ್ತಾ ಬಾಗಿಲಿಗೆ ಧಾವಿಸಿದರೂ ತುಂಬ ತಡವಾಗಿಬಿಟ್ಟಿರುತ್ತದೆ! ಢಮಾರ್ ಆಸ್ಫೋಟ ಮಾರ್ಮಲೇಡ್ ಬಾಟಲುಗಳನ್ನು ಸಿಡಿಸಿ, ಗೋಡೆಗಳ ಮೇಲೆ ಪತ್ರಿಕೆಯ ಹೆಡ್‌ಲೈನುಗಳನ್ನು ಹರಡುತ್ತದೆ. ಯುದ್ಧ! ವಿಪತ್ತು! ಭಯಭೀತಿ! ಆಸ್ಫೋಟ ಛಾವಣಿಯನ್ನು ಸೀಳಿ, ಕಿಟಕಿಯ ಗಾಜುಗಳನ್ನು ಪುಡಿಗುಟ್ಟುತ್ತದೆ. ರೂಮು ತುಂಬ ಖಣಖಣವೆನ್ನುವ ಗಾಜು, ಹೊಗೆ, ರೋಚಕ ಸುದ್ದಿಗಳ ಹಾಳುಮೂಳು...

ಅದು ಕೇವಲ ಪ್ರಾರಂಭವಷ್ಟೆ. ಆ ದಿನದಿಂದ ಸ್ಫೋಟಗೊಳ್ಳುವ ಈ ಪತ್ರಿಕೆಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಅವುಗಳಿಂದಾಗಿ ಒಂದೇ ಒಂದು ಮನೆಯಾಗಲೀ ಬಡಾವಣೆಯಾಗಲೀ